# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 172 (148) |
| ಸದಸ್ಯರ ಹೆಸರು | : | ಶ್ರೀ ಕೆ. ಪ್ರತಾಪಸಿಂಹ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |
| ಉತ್ತರಿಸುವ ದಿನಾಂಕ | : | 10.12.2024 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಡಿಕೆ ಕ್ಯಾನ್ಸರ್‌ಕಾರಕ ಎಂಬ ವರದಿಯನ್ನು ವಿಶ್ವ ಆರೋಗ್ಯ ಸಂಸ್ಥೆಯ ಅಂಗಸಂಸ್ಥೆಯಾದ ಐ. ಎ. ಆರ್. ಸಿ (International Agency for Research on Cancer) ಪ್ರಕಟಿಸಿದ್ದು,ಇದರಿಂದ ರಾಜ್ಯದಲ್ಲಿನ ಅಡಿಕೆ ಬೆಳೆಗಾರರ ಮೇಲೆ ಮತ್ತೊಮ್ಮೆ ಆತಂಕದ ಛಾಯೆ ಆವರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಅಂತರಾಷ್ಟ್ರೀಯ ಮಟ್ಟದಲ್ಲಿ ಅಡಿಕೆ ಬಗ್ಗೆ ಋಣಾತ್ಮಕ ಭಾವನೆ ವ್ಯಕ್ತವಾಗುತ್ತಿರುವ ಹಿನ್ನಲೆಯಲ್ಲಿ ಅಡಿಕೆಯ ಔಷಧೀಯ ಮತ್ತು ಉತ್ತಮ ಗುಣಗಳನ್ನು ದಾಖಲೆಯ ಆಧಾರದಲ್ಲಿ ತಿಳಿಸಲು ಅಡಿಕೆ ಉತ್ಪನ್ನಗಳ ಬಗ್ಗೆ ವ್ಯಾಪಕ ಸಂಶೋಧನೆಗೆ ಸರ್ಕಾರ ಈಗಲಾದರೂ ವ್ಯವಸ್ಥಿತ ಕ್ರಮವಹಿಸುವುದೇ; | 1. ಅಡಿಕೆ ಔಷಧೀಯ ಗುಣಗಳ ಬಗ್ಗೆ ದಾಖಲೆ ಆಧಾರದಲ್ಲಿ ತಿಳಿಸಲು ತೋಟಗಾರಿಕೆ ಇಲಾಖೆ ವತಿಯಿಂದ ಎಂ.ಎಸ್. ರಾಮಯ್ಯ ಬೆಂಗಳೂರು ಸಂಸ್ಥೆಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ.<br>2. ಎಂ.ಎಸ್.ರಾಮಯ್ಯ ವಿಶ್ವ ವಿದ್ಯಾನಿಲಯದವರು ಅಡಿಕೆ ಕ್ಯಾನ್ಸರ್ ಕಾರಕವಲ್ಲ ಎಂಬ ವಿಷಯದ ಬಗ್ಗೆ ಮಧ್ಯಂತರ ವರದಿಯನ್ನು ನೀಡಿರುತ್ತಾರೆ.<br>3. ಅಡಿಕೆಯನ್ನು ತಂಬಾಕು ಅಥವಾ ಪಾನ ಮಸಾಲಗಳೊಂದಿಗೆ ಬಳಸದೆ ಇದ್ದಲ್ಲಿ ಹಾಗೂ ಮಿತ ಹಿತ ಪ್ರಮಾಣದಲ್ಲಿ ಸೇವನೆ ಮಾಡಿದಲ್ಲಿ ಅಪಾಯ ಕಾರಿಯಲ್ಲವೆಂಬುದು ವರದಿಯಾಗಿದೆ.<br>4. ಅಡಿಕೆ ಉತ್ಪನ್ನಗಳ ಸಂಶೋಧನೆಯನ್ನು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ ಶಿವಮೊಗ್ಗ ವತಿಯಿಂದ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | 5. ಅಡಿಕೆ ಹಾಳೆ(ಪಟ್ಟೆ)ಯಿಂದ ಪ್ರಕೃತಿಯಲ್ಲಿ ಸುಲಭವಾಗಿ ವಿಲೀನಗೊಳ್ಳಬಹುದಾದ ಲೋಟ, ತಟ್ಟೆ, ಹ್ಯಾಟ್, ಚಮಚ, ವ್ಯಾನಿಟಿ ಬ್ಯಾಗ್, ಪರ್ಸ್, ಪೆನ್ ಸ್ಟ್ಯಾಂಡ್ ಮತ್ತು ಹಾರಗಳನ್ನು ಉತ್ಪಾದಿಸಬಹುದು.<br>6. ಈ ಉತ್ಪನ್ನಗಳನ್ನು ಹಲವು ಸಣ್ಣ ಉದ್ಯಮಗಳು ಉತ್ಪಾದಿಸುತ್ತಿವೆ. ಈ ಉತ್ಪನ್ನಗಳ ಆರ್ಥಿಕ ಲಾಭದಾಯಕತೆ ಮತ್ತು ಉದ್ಯಮದ ಸುಸ್ತಿರತೆ ಕುರಿತು ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ.<br>7. ಅಡಿಕೆಯ ವಿವಿಧ ವರ್ಗಗಳ ಭೌತಿಕ ಮತ್ತು ಆಂತರಿಕ ಮಾನದಂಡಗಳ ಕುರಿತಾದ ಸಂಶೋಧನೆ ಪ್ರಗತಿಯಲ್ಲಿದೆ.<br>8. ಅಡಿಕೆ ಸಿಪ್ಪೆಯನ್ನು ಉತ್ತಮ ಕಾಂಪೋಸ್ಟ್ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಸಾಮಾನ್ಯ ಕೊಟ್ಟಿಗೆ ಗೊಬ್ಬರಕ್ಕಿಂತಲು ಅಡಿಕೆ ಗೊಬ್ಬರದಲ್ಲಿ ಹೆಚ್ಚಿನ ಪೌಷ್ಟಿಕಾಂಶಗಳು ಕಂಡು ಬಂದಿದೆ.<br>9. ಜವಳಿ ಉದ್ಯಮದಲ್ಲಿ ಅಡಿಕೆ ಬಣ್ಣವನ್ನು ನೈಸರ್ಗಿಕ ಬಣ್ಣವಾಗಿ ಬಳಸಲಾಗುತ್ತಿದೆ. |
| ಇ) | ನೂರಾರು ವರ್ಷಗಳಿಂದ ಜನರು ಅಡಿಕೆಯನ್ನು ಬಳಕೆ ಮಾಡುತ್ತಿದ್ದು, ಆರೋಗ್ಯದಿಂದಲೇ ಇದ್ದು ಮತ್ತು ಈ ಬಗ್ಗೆ ಅಡಿಕೆ ಕ್ಯಾನ್ಸರ್‌ಕಾರಕವಲ್ಲ ಎಂಬ ಸಂಗತಿಯನ್ನು ವೈದ್ಯರು ಹಾಗೂ ಸಂಶೋಧನಾ ಸಂಸ್ಥೆಗಳ ನೆರವಿನಿಂದ ಅಡಿಕೆಯ ಔಷಧೀಯ ಮತ್ತು ಉತ್ತಮ ಗುಣಗಳನ್ನು ದಾಖಲೆಯ ಆಧಾರದಲ್ಲಿ ಕೇಂದ್ರ ಸರ್ಕಾರಕ್ಕೆ ಮತ್ತು ಆ ಮೂಲಕ ವಿಶ್ವ ಆರೋಗ್ಯ ಸಂಸ್ಥೆಗೆ ವಿಸ್ತೃತ ವರದಿ ಸಲ್ಲಿಸಲು ಸರ್ಕಾರ ಕೂಡಲೇ ವಹಿಸಲಿರುವ ಕ್ರಮಗಳೇನು? | ಅಡಿಕೆ ಕ್ಯಾನ್ಸರ್ ಕಾರಕವಲ್ಲ ಎಂಬ ವಿಷಯದ ಬಗ್ಗೆ ತೋಟಗಾರಿಕೆ ಇಲಾಖೆ ವತಿಯಿಂದ ಎಂ.ಎಸ್.ರಾಮಯ್ಯ ವಿಶ್ವ ವಿದ್ಯಾಲಯದಲ್ಲಿ ರೂ.31.80ಲಕ್ಷಗಳ ಅನುದಾನದಿಂದ ಸಂಶೋಧನೆ ಕೈಗೊಳ್ಳಲಾಗುತ್ತಿದೆ. ಮಧ್ಯಂತರ ವರದಿ ಸಲ್ಲಿಕೆಯಾಗಿದ್ದು ಅಂತಿಮ ವರದಿ ಪಡೆದು ಅದರ ಆಧಾರದ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

HORTI 494 HGM 2024

**(ಎಸ್. ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಇಲಾಖೆ